**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಕೊಪ್ಪ**

**<u>ಸಿ. ಸಿ. ನಂ.397/2023</u>**

**<u>ಪಿರ್ಯಾಧಿದಾರರುಃ</u>** ಶ್ರೀ ಕುಮಾರ ಯು.ಎಸ್. @ ಕುಮಾರ ಸ್ವಾಮಿ ಯು.ಎಸ್., ಬಿನ್ ಸೂರಪ್ಪ ಗೌಡ, ಸುಮಾರು 47 ವರ್ಷ, ವಾಸ ಉ‍ಾಟುವಳ್ಳಿ, ವಿ.ಟಿ.ಸಿ. ನರಸೀಪುರ, ನಾರ್ವೆ ಅಂಚೆ, ಕೊಪ್ಪ ತಾಲ್ಲೂಕು.

-**ವಿರುದ್ಧ** -

**<u>ಆರೋಪಿಃ</u>** ಶ್ರೀ ಅಶೋಕ ಬಿನ್ ರಾಜಶೇಖರ, ಸುಮಾರು 46 ವರ್ಷ, ಕೇರಾ ಅಫ್ ಸುಮನ, ವಾಸ ಹಿರಿಕೆರೆ, ಮೇಲಿನಪೇಟೆ, ಕೊಪ್ಪ ಅಂಚೆ, ಕೊಪ್ಪ ತಾಲ್ಲೂಕು.

**<u>ಆರೋಪಣೆ</u>**

ಆರೋಪಿಯಾದ ನೀವು ನಿಮ್ಮ ತುರ್ತು ಅವಶ್ಯಕತೆಗಾಗಿ ಪಿರ್ಯಾಧಿದಾರರಿಂದ ಫೆಬ್ರುವರಿ ಮೊದಲನೆ ವಾಸ 2023 ರಂದು ರೂ. 4,90,000/- ಗಳ ಕೈ ಸಾಲವನ್ನು ಪಡೆದುಕೊಂಡಿದ್ದು, ಸದರಿ ಸಾಲವನ್ನು ತೀರುವಳಿ ಮಾಡುವ ಸಲುವಾಗಿ ನೀವು ನಿಮ್ಮ ಬಾಬ್ತು ಅವರಿಗೆ ಚೆಕ್ ನಂ. 231266, ದಿನಾಂಕ 06.04.2023 ನ್ನು ನಮೂದಿಸಿದ ಸ್ಟೇಟ್ ಬ್ಯಾಂಕ್ ಅಫ್ ಇಂಡಿಯಾ, ಮುಖ್ಯ ರಸ್ತೆ, ಬಸ್ ನಿಲ್ದಾಣದ ಹತ್ತಿರ, ಕೊಪ್ಪ ಶಾಖೆಯ ಒಂದು ಚೆಕ್ಕನ್ನು ನೀಡಿದ್ದು, ಅವರು ಚೆಕ್ಕನ್ನು ಸದರಿ ಶಾಖೆಗೆ ಹಾಜರುಪಸಿದಾಗ **"Funds Insufficient** "ಎಂಬ ಹಿಂಬರಹದೊಂದಿಗೆ ನೀವು ಕೊಟ್ಟಂತ ಚೆಕ್ ವಾಪಸ್ಸಾಗಿದ್ದು ಸದರಿ ಚೆಕ್ ಅಮಾನ್ಯಗೊಂಡ ಬಗ್ಗೆ ನಿಮ್ಮ ಗಮನಕ್ಕೆ ದಿನಾಂಕ 24.04.2023 ರಂತೆ ವಕೀಲರ ನೋಟೀಸು ನೀಡಿದ್ದು, ಸದರಿ ನೋಟೀಸು ದಿನಾಂಕ 29.04.2023 ರಂದು ನಿಮಗೆ ಜಾರಿಯಾಗಿದಾಗ್ಯೂ ಸಹ ನೀವು ಚೆಕ್ ಬಾಬ್ತು ಹಣವನ್ನು ನೀಡದೇ ವರ್ಗಾವಣೀಯ ಲಿಖಿತ ಅಧಿನಿಯಮ ಕಲಂ 138 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಪ್ರಶ್ನೆ 1ಃ- ನಿಮಗೆ ಓದಿ ಹೇಳಿದ ಆರೋಪಣೆ ಅರ್ಥವಾಯಿತೇ?
ಉತ್ತರಃ ತಿಳಿಯಿತು.

ಪ್ರಶ್ನೆ 2ಃ-	ಮೇಲಿನ ಆಪಾಧನೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ	ವಿಚಾರಣೆಯಾಗಬೇಕು.

ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಸ್ವತಃ ನಾನೇ ಬರೆದುಕೊಂಡಿರುವುದು ನಿಜವೆಂದು ದೃಡೀಕರಿಸುತ್ತೇನೆ.

ದಿನಾಂಕಃ 13.08.2025.

ಸಹಿ/- 13.08.2025.
( ನಂದಿನಿ ಎಂ.ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಕೊಪ್ಪ